# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಜೂನ್ 2024** ಬೆಂಗಳೂರು, ಸಂಪುಟ 10, ಸಂಚಿಕೆ 02, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 June 2024**, Bengaluru, Vo 10, Issue No.02 Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription : Annual Rs. 30; Life : Rs. 500/-
Published by: Karnataka Vipassana Prachara Samiti Trust.

## ಧಮ್ಮ ಪದಗಳು

ಯೋ ಚ ಪುಬ್ಬೇ ಪಮಜ್ಜಿತ್ವಾ,
ಪಚ್ಛಾ ಸೋ ನಪ್ಪಮಜ್ಜತಿ ;
ಸೋ ಇಮಂ ಲೋಕಂ ಪಭಾಸೇತಿ,
ಅಬ್ಭಾ ಮುತ್ತೋವ ಚಂದಿಮಾ.

ಯಾರು ಮುಂಚೆ ಅಜಾಗರೂಕರಾಗಿದ್ದು ಈಗ ಜಾಗರೂಕರಾಗಿರುವರೋ ಅಂತಹವರು ಮರೆಯಾಗಿರುವ ಚಂದ್ರ ಮೋಡ ಸರಿದಾಗ ಬೆಳಗುವಂತೆ ಈ ಲೋಕಕ್ಕೆ ಬೆಳಕನ್ನು ನೀಡುವರು.

ಧಮ್ಮಪದ, ಲೋಕವಗ್ಗೋ –172

## ನನ್ನ ಒಂದು ದೊಡ್ಡ ತಲೆಭಾರ ಕಳೆಯಿತು !

ಶ್ರೀ ಎಸ್.ಎನ್. ಗೋಯಂಕ (1924–2013)

**(ನವೆಂಬರ್ 2023ರ ಇಂಗ್ಲಿಷ್ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ.)**

'ಮುಂಗೈನಲ್ಲಿರುವ ಬಳೆಗಳನ್ನು ನೋಡಲು ನಮಗೆ ಕನ್ನಡಿಯ ಅವಶ್ಯಕತೆ ಏಕೆ ಬೇಕು?' ಸ್ವಯಂವ್ಯಕ್ತವಾಗುವುದಕ್ಕೆ ಪುರಾವೆ ಏಕೆ ಬೇಕು? ಈ ಮೂಲಭೂತ ತತ್ವದನ್ವಯ ವಿಪಶ್ಯನದ ಪ್ರಾಯೋಗಿಕ, ಅನುಭವಾತ್ಮಕ ಭಾಗವನ್ನು ಅನುಮಾನಿಸಲು ಯಾವುದೇ ಕಾರಣವಿಲ್ಲ. ವಿಪಶ್ಯನದ ಲಾಭದಾಯಕ ಫಲಿತಾಂಶವೇ ಅದರ ಪ್ರತ್ಯಕ್ಷ ಸಾಕ್ಷಿಯಾಗಿದೆ. ಮಲಿನತೆಗಳಿಂದ ಬಿಡುಗಡೆಯು ಒಂದು ಕುರುಡು ನಂಬಿಕೆಯಾಗಿರಲಿಲ್ಲ; ಅದು ಅನುಭವದಿಂದ ಅರಿತ ವಾಸ್ತವಿಕ ಸತ್ಯವಾಗಿತ್ತು. ವಿಪಶ್ಯನದ ಅಭ್ಯಾಸವು ಆಳವಾದಂತೆ, ಅದರ ಸಾರ್ವತ್ರಿಕ ಮತ್ತು ವೈಜ್ಞಾನಿಕ ಅಂಶಗಳು ಹೆಚ್ಚು ಸ್ಪಷ್ಟವಾದವು. ಆದಾಗ್ಯೂ, ಮನಸ್ಸಿನಲ್ಲಿದ್ದ ಪಂಥೀಯ ತತ್ವಸಿದ್ಧಾಂತದ ದಪ್ಪ ಪದರದ ಕಾರಣದಿಂದ, ವಿಪಶ್ಯನದ ಸೈದ್ಧಾಂತಿಕ ಅಂಶಗಳ ಬಗೆಗಿನ ಅನುಮಾನಗಳು ಬರುತ್ತಿದ್ದವು.

ಮಾರ್ಗವು ಅದ್ಭುತವಾಗಿದೆ, ಅದು ಸತ್ಯ. ಅದು ಹಿತಕರವಾದ ಪರಿಣಾಮಗಳನ್ನು ಹೊಂದಿದೆ. ಅದು ವೈಜ್ಞಾನಿಕ ಮತ್ತು ಸಾರ್ವತ್ರಿಕವಾಗಿದೆ. ಆದರೂ ಅದು ನಾಸ್ತಿಕವಾದುದು ಎಂದು ನಾನು ಯೋಚಿಸಿದೆ. ನಾನು, ಒಬ್ಬ ಶ್ರದ್ಧಾವಂತ ಆಸ್ತಿಕ, ನಾಸ್ತಿಕನಾಗುವುದರ ಬಗೆಗೆ ಭಯವಾಯಿತು. ಈ ಆಳವಾಗಿ ಬೇರೂರಿದ ಭಯವು ನನ್ನ ಮನಸ್ಸಿಗೆ ತೊಂದರೆಕೊಡುತ್ತಿತ್ತು.

ಇದು ಯಾವ ಸಮಯದಲ್ಲಿ ಎಂದರೆ, ಭಾರತದಿಂದ ಕಣ್ಮರೆಯಾಗಿದ್ದ ಬುದ್ಧರ ಬೋಧನೆಗಳನ್ನು ನಾನು ಸ್ವಲ್ಪವೂ ಓದದೇ ಇದ್ದಾಗ. ಹಾಗಾಗಿ, ಪುರಾತನ ಭಾರತದಲ್ಲಿ "ನಾಸ್ತಿಕ" ಎಂಬ ಪದವು ಬಹಳ ಅವಹೇಳನಕಾರಿಯಾಗಿತ್ತು ಎಂಬುದು ನನಗೆ ತಿಳಿದಿರಲಿಲ್ಲ. ಭಗವಾನ್ ಬುದ್ಧರು ಸಹ ಈ ಪದವನ್ನು ಈ ಅರ್ಥದಲ್ಲಿಯೇ ಉಪಯೋಗಿಸಿದ್ದು; ಆದರೆ ಆಗ ಅದರ ಅರ್ಥ ವಿವರಣೆ(ವ್ಯಾಖ್ಯಾನವು)ಯು ಭಿನ್ನವಾಗಿತ್ತು. "ನಾಸ್ತಿಕ" ಎಂದರೆ, ಕರ್ಮ ಮತ್ತು ಅದರ ಫಲಗಳ ಪ್ರಕೃತಿಯ ನಿಯಮವನ್ನು ನಂಬದೇ ಇರುವವನು. ಇದರಲ್ಲಿ ನಂಬಿಕೆ ಇರುವವರನ್ನು "ಆಸ್ತಿಕರು" ಎಂದು ಕರೆದರು. ಒಳ್ಳೆಯ ಕೆಲಸಗಳು ಒಳ್ಳೆಯ ಫಲಗಳನ್ನು, ಕೆಟ್ಟ ಕೆಲಸಗಳು ಕೆಟ್ಟ ಫಲಗಳನ್ನು ನೀಡುತ್ತವೆ ಎಂಬುದನ್ನು ನಾಸ್ತಿಕರು ನಂಬುತ್ತಿರಲಿಲ್ಲ. ಒಂದು ನದಿಯ ತುಂಬ ಬರೀ ಹೆಣಗಳನ್ನು ತುಂಬಿದರೂ ಅದು ಕೆಟ್ಟ ಕರ್ಮದ ಫಲವನ್ನು ನೀಡುವುದಿಲ್ಲ. ಧಮ್ಮಕ್ಕೆ(ಪ್ರಕೃತಿಯ ನಿಯಮಕ್ಕೆ) ವಿರುದ್ಧವಾದಂತಹ ಮನೋಭಾವ ಹೊಂದಿರುವವರನ್ನು ನಾಸ್ತಿಕರು ಎಂದು ಕರೆಯಲಾಗುತ್ತಿತ್ತು. ಆದ್ದರಿಂದ, ಈ ಪದವನ್ನು ಬಹಳ ಅನುಚಿತವಾದ ಅರ್ಥದಲ್ಲಿ ಉಪಯೋಗಿಸ ಲಾಗುತ್ತಿತ್ತು.

ಸಮಯ ಕಳೆದಂತೆ, ಕೆಲವು ಜನರು ತಮ್ಮ ಸ್ವಾರ್ಥದ ಉದ್ದೇಶಕ್ಕಾಗಿ ಭಗವಾನ್ ಬುದ್ಧರನ್ನು ಬಹಿರಂಗವಾಗಿ ಟೀಕಿಸಲು ಈ ಪದದ ಅರ್ಥವನ್ನು ಬದಲಾಯಿಸಿದರು. ಅವರು ತಮ್ಮ ಪಟ್ಟಭದ್ರ ಹಿತಾಸಕ್ತಿಯ ಆಳವಾದ ಪ್ರಭಾವಕ್ಕೊಳಗಾಗಿದ್ದರು. ಬುದ್ಧರ ಬೋಧನೆಗಳನ್ನು ಟೀಕಿಸಲು ಅವರಿಗೆ ಸಾಧ್ಯವಿರಲಿಲ್ಲ. ಏಕೆಂದರೆ ಅವುಗಳಲ್ಲಿ ಯಾವ ಲೋಪವೂ ಇರಲಿಲ್ಲ. ಜನ್ಮಾಧಾರಿತ ಚಾತುರ್ವರ್ಣ ಜಾತಿ ಪದ್ಧತಿಯನ್ನು ಬುದ್ಧರು ತಿರಸ್ಕರಿಸಿದರು. ಇದು ಕೆಲವರಿಗೆ ಸ್ವೀಕಾರಾರ್ಹವಾಗಲಿಲ್ಲ. ಜಾತಿ ವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳಲು ಅವರು, ಭಗವಾನ್ ಬುದ್ಧರು ಸಂಪೂರ್ಣವಾಗಿ ತಿರಸ್ಕರಿಸಿದ ತಮ್ಮ ಧರ್ಮಗ್ರಂಥಗಳನ್ನು ಉಲ್ಲೇಖಿಸುತ್ತಿದ್ದರು. ಇಂತಹ ವ್ಯಕ್ತಿಗಳು ಬುದ್ಧರನ್ನು "ನಾಸ್ತಿಕ" ಎಂದು ಟೀಕಿಸುತ್ತಿದ್ದರು. ವೇದಗಳ ಪರಮಾಧಿಕಾರವನ್ನು ಪರಿಗಣಿಸದಿರುವ ವ್ಯಕ್ತಿಯನ್ನು ನಾಸ್ತಿಕನೆಂದೂ, ವೇದಗಳ ಪರಮಾಧಿಕಾರವನ್ನು ನಂಬುವ ವ್ಯಕ್ತಿಯನ್ನು ಆಸ್ತಿಕ ಎಂತಲೂ ಅರ್ಥೈಸಲಾಯಿತು. ಕೆಲವರು ಈ ವ್ಯಾಖ್ಯಾನವನ್ನು ಒಪ್ಪಿಕೊಂಡಿರ ಬಹುದು, ಆದರೆ ಇತರರು ಒಪ್ಪಲಿಲ್ಲ. ಏಕೆಂದರೆ ವೇದಗಳು ಹೆಚ್ಚುವರಿಯಾಗಿ ಹಿಂಸಾತ್ಮಕ ಬಲಿಗಳನ್ನು ನಿಗದಿಮಾಡಿದ್ದವು. ಇವುಗಳನ್ನು ದೇಶದಲ್ಲಿ ನಿಲ್ಲಿಸಲಾಗಿತ್ತು.

ಸಮಯ ಕಳೆದಂತೆ, ಭಗವಾನ್ ಬುದ್ಧರನ್ನು ಟೀಕಿಸಲು, ಖಂಡಿಸಲು "ನಾಸ್ತಿಕ" ಪದಕ್ಕೆ ಹೊಸ ಅರ್ಥವನ್ನು ನೀಡಿ ವ್ಯಾಪಕವಾಗಿ ಹರಡಲಾಯಿತು. ಇದರ ಪ್ರಕಾರ, ಆತ್ಮ ಅಥವಾ ಪರಮಾತ್ಮನ ಅಸ್ತಿತ್ವದಲ್ಲಿ ನಂಬಿಕೆಯಿಲ್ಲದಿರುವ ವ್ಯಕ್ತಿಯು "ನಾಸ್ತಿಕ". ನಿಧಾನವಾಗಿ ಈ ವ್ಯಾಖ್ಯಾನವು ವ್ಯಾಪಕವಾಗಿ ಹರಡಿತು ಮತ್ತು ಸಾರ್ವತ್ರಿಕವಾಗಿ ಇದನ್ನು ಸ್ವೀಕರಿಸಲಾಯಿತು.

ಈ ತಪ್ಪು ವ್ಯಾಖ್ಯಾನದಿಂದ ಪ್ರಭಾವಿತನಾಗಿ, ನಾನು ಸಹ ಶಂಕಿತನಾದೆ. ನಾಸ್ತಿಕನಾಗುವುದು ಮತ್ತು ಆತ್ಮ ಅಥವಾ ಪರಮಾತ್ಮನ ಅಸ್ತಿತ್ವವನ್ನು ನಂಬದಿರುವುದು ನನಗೆ ಅಧಾರ್ಮಿಕವಾಗಿ ತೋರಿತು. ನನ್ನ ಮನಸ್ಸನ್ನು ಮಲಿನತೆಗಳಿಂದ ಬಿಡುಗಡೆ ಮಾಡಿ ನನ್ನ ಜೀವನವನ್ನು ಬದಲಾಯಿಸಿದ ಅನೇಕ ಗುಣಗಳನ್ನು ವಿಪಶ್ಯನವು ಹೊಂದಿದ್ದರೂ "ಆಸ್ತಿಕ" ಮತ್ತು "ನಾಸ್ತಿಕ" ಎಂಬ ಪದಗಳ ತಪ್ಪು ಗ್ರಹಿಕೆಯು ನನಗೆ ತಲೆಭಾರ ಉಂಟು ಮಾಡಿತು.

ಆದಾಗ್ಯೂ ಆತ್ಮ ಮತ್ತು ಪರಮಾತ್ಮದ ಬಗೆಗಿನ ಅನುಮಾನಗಳು ನನ್ನಲ್ಲಿದ್ದವು. ಈ ಆತ್ಮ– ಅದು ಏನು? ನನಗೆ ಸ್ಪಷ್ಟವಾದ ಉತ್ತರವಿರಲಿಲ್ಲ. ಆತ್ಮವು ಅದು ಇರುವ ಶರೀರದ ಗಾತ್ರದಷ್ಟೇ ಇರುತ್ತದೆ ಎಂದು ನಂಬುವ ಭಾರತದ ಒಂದು ಸಂಪ್ರದಾಯದ ಬಗ್ಗೆ ನನಗೆ ತಿಳಿದಿತ್ತು. ಅಂದರೆ, ಆನೆಯ ಆತ್ಮವು ಆನೆಯಷ್ಟೇ ದೊಡ್ಡದಾಗಿರುತ್ತದೆ. ಇರುವೆಯ ಆತ್ಮವು ಇರುವೆಯ ಗಾತ್ರದಷ್ಟೇ ಇರುತ್ತದೆ. ಮನುಷ್ಯನ ಆತ್ಮವು ವ್ಯಕ್ತಿಯ ಶರೀರದ ಗಾತ್ರದಷ್ಟೇ ಇರುತ್ತದೆ. ಎಲ್ಲಾ ಆತ್ಮಗಳೂ ಒಂದೇ ಗಾತ್ರದಲ್ಲಿ ಇರದಿದ್ದರೆ, ಆನೆಯ ಆತ್ಮವು ಅದು ಸತ್ತ ಮೇಲೆ ಇರುವೆಯ ಚಿಕ್ಕ ಶರೀರವನ್ನು ಸೇರಲು ಹೇಗೆ ಸಾಧ್ಯ? ಈ ಪ್ರಶ್ನೆಯು ನನ್ನನ್ನು ಕಂಗೆಡಿಸಿತು.

ಮತ್ತೊಂದು ನಂಬಿಕೆ ಎಂದರೆ, ಆತ್ಮವು ಹೆಬ್ಬೆರಳಿನ ಗಾತ್ರದಷ್ಟಿರುತ್ತದೆ ಎಂಬುದು. ಆದರೆ ಯಾರ ಹೆಬ್ಬೆರಳು? ಅದು ಮನುಷ್ಯನ ಹೆಬ್ಬೆರಳಿನ ಗಾತ್ರದ್ದಾದರೆ, ಆಗಲೂ ಅದು ಇರುವೆಯ ಶರೀರವನ್ನು ಪ್ರವೇಶಿಸಲು ಸಾಧ್ಯವಿಲ್ಲ. ಹಾಗಾಗಿ, ಅಂತಿಮ ನಂಬಿಕೆಯೆಂದರೆ, ಒಂದು ಜೀವಿಯ ಆತ್ಮವು ಆ ಜೀವಿಯ ಹೆಬ್ಬೆರಳಿನ ಗಾತ್ರದಷ್ಟಿರುತ್ತದೆ. ಈ ನಂಬಿಕೆ ಸರಿ ಎಂದಾದರೆ, ಎಲ್ಲಾ ಆತ್ಮಗಳು ಒಂದೇ ಗಾತ್ರದಲ್ಲಿ ಇರುವುದಿಲ್ಲ, ಮತ್ತೆ ಅವು ಸಮನಾಗಿರುವುದಿಲ್ಲ. ಆನೆಯ ಆತ್ಮವು ಅದರ ಹೆಬ್ಬೆರಳಿನ ಗಾತ್ರದಷ್ಟಿದ್ದರೂ, ಅದು ಸತ್ತ ಮೇಲೆ, ಮುಂದಿನ ಜನ್ಮದಲ್ಲಿ ಇರುವೆಯ ಶರೀರಕ್ಕೆ ಹೇಗೆ ಹೊಂದುತ್ತದೆ?

ಆಗ, ಆತ್ಮವು ಸಾಸಿವೆ ಕಾಳಿನ ಗಾತ್ರದಷ್ಟಿರುತ್ತದೆ ಎಂಬ ನಂಬಿಕೆ ಬಂತು. ಸಮಸ್ಯೆ ಎಂದರೆ, ಕೆಲವು ಜೀವಿಗಳು ಸಾಸಿವೆ ಕಾಳಿಗಿಂತ ಚಿಕ್ಕವಿರುತ್ತವೆ. ಆದ್ದರಿಂದ

ಸಾಸಿವೆ ಗಾತ್ರದ ಆತ್ಮವು ಅವುಗಳ ಶರೀರವನ್ನು ಪ್ರವೇಶಿಸಲು ಸಾಧ್ಯವಿಲ್ಲ. ಆಗ ಆತ್ಮವು ಕೂದಲಿನ ತುದಿಯ ಗಾತ್ರದಲ್ಲಿರುತ್ತದೆ ಎಂಬ ನಂಬಿಕೆ ಬಂತು. ಆದರೂ ಅನೇಕ ಸೂಕ್ಷ್ಮಾಣು ಜೀವಿಗಳು ಎಷ್ಟು ಚಿಕ್ಕವಿರುತ್ತವೆಂದರೆ, ಲಕ್ಷಾಂತರ ಜೀವಿಗಳು ಒಂದು ಕೂದಲಿನ ತುದಿಯಲ್ಲಿರಬಹುದು.

ಅನೇಕ ಅನುಮಾನಗಳಿಗೆ ಕಾರಣವಾದ ಆತ್ಮದ ಬಗೆಗಿನ ಅನೇಕ ನಂಬಿಕೆಗಳಲ್ಲಿ ಎದ್ದು ಕಾಣುವ ಒಂದು ಅಂಶವೆಂದರೆ : ಆತ್ಮವಿಲ್ಲದಿದ್ದರೆ, ಪುನರ್ಜನ್ಮ ಪಡೆಯುವುದು ಯಾರು? ಏಕೆಂದರೆ ಶರೀರ ಮತ್ತು ಮನಸ್ಸು ಎರಡೂ ನಾಶವಾಗುವಂತಹವು; ಪ್ರತಿಯೊಂದು ಜನ್ಮದಲ್ಲೂ ಆತ್ಮಗಳ ಗಾತ್ರವು ಬದಲಾಗುತ್ತದೆ ಎಂದಾದರೂ ಒಂದು ಜನ್ಮದಿನದಿಂದ ಮತ್ತೊಂದು ಜನ್ಮಕ್ಕೆ, ಹೀಗೆ ಲಕ್ಷಾಂತರ ಜನ್ಮಗಳಿಗೆ ಹೋಗುವ, ನಾಶವಾಗದೇ ಇರುವಂತಹ ಒಂದು ಅಂಶ ಇರಲೇಬೇಕು. ಏಕೆಂದರೆ ಮುಕ್ತಿ ಹೊಂದಲು ನಾನಾ ರೀತಿಯ ಜನ್ಮಗಳನ್ನು ಹಾಯ್ದು ಹೋಗಲೇಬೇಕು.

ಪುನರ್ಜನ್ಮವನ್ನು ಒಪ್ಪಿಕೊಳ್ಳುವುದಾದರೆ, ಆತ್ಮದ ಇರುವಿಕೆಯನ್ನೂ ಒಪ್ಪಿಕೊಳ್ಳಲೇಬೇಕು. ಪುನರ್ಜನ್ಮದಲ್ಲಿ ನಂಬಿಕೆಯಿಡುತ್ತಾ, ಆತ್ಮದ ಅಸ್ತಿತ್ವವನ್ನು ಅಲ್ಲಗಳೆಯುವುದು ಒಂದು ರೀತಿಯ ಅಸಂಬದ್ಧತೆ ಎಂದು ತೋರಿತು. ಆ ಸಮಯದಲ್ಲಿ ಈ ತರ್ಕವು ನನಗೆ ಬಹಳ ಒಪ್ಪಿಗೆಯಾಯಿತು. ಹಾಗಾಗಿ ವಿಪಶ್ಯನದ ಪ್ರಾಯೋಗಿಕ ಅಂಶವನ್ನು ನಾನು ಸಂಪೂರ್ಣವಾಗಿ ಸ್ವೀಕರಿಸಿದರೂ, ಅದರ ಕೆಲವು ಸೈದ್ಧಾಂತಿಕ ಅಂಶಗಳು ನನಗೆ ಸರಿಕಾಣಲಿಲ್ಲ. ಆತ್ಮದ ನಂಬಿಕೆಯು ನನ್ನಲ್ಲಿ ಹಾಗೆಯೇ ಮುಂದುವರಿಯಿತು.

ದೇವರ ನಂಬಿಕೆಯ ಬಗೆಗೂ ಇದೇ ಭಾವನೆಯಿತ್ತು. ದೇವರ ಅಸ್ತಿತ್ವದ ಬಗ್ಗೆ ನಂಬಿಕೆಯಿದ್ದರೂ, ಅನೇಕ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಮೂಡಿದವು. ದೇವರು ನಿರಾಕಾರ ಮತ್ತು ನಿರ್ಗುಣ ಎಂದು ಕೆಲವರು ನಂಬಿದರೆ, ಅವನಿಗೆ ಆಕಾರ ಮತ್ತು ಗುಣ ಎರಡೂ ಇವೆ ಎಂದು ಕೆಲವರು ನಂಬುತ್ತಾರೆ. ಅವನಿಗೆ ಆಕಾರವಿದ್ದರೆ, ಯಾವ ರೀತಿ ಕಾಣುತ್ತಾನೆ? ಅವನು ಗೌರವರ್ಣದವನೇ ಅಥವಾ ಕಪ್ಪು ಬಣ್ಣದವನೇ? ಅವನಿಗೆ ಎಷ್ಟು ಕೈಗಳಿವೆ, ಎರಡೇ, ನಾಲ್ಕೇ ಅಥವಾ ನೂರೇ? ಭಾರತೀಯ ದೇವರುಗಳು ಕಾಣುವಂತೆ ಅವನು ಸುಂದರನೇ, ಗಡ್ಡ ಮೀಸೆ ಇಲ್ಲದವನೇ, ಅರೆಬೆತ್ತಲೆಯಾಗಿ ಅನೇಕ ಒಡವೆಗಳನ್ನು ಧರಿಸಿರುವವನೇ ಅಥವಾ ಪಾಶ್ಚಿಮಾತ್ಯರ ಚಿತ್ರಗಳಲ್ಲಿ ಕಾಣುವಂತೆ, ಬಿಳಿ ಕೂದಲಿನ, ಉದ್ದ ಗಡ್ಡ ಮತ್ತು ನಿಲುವಂಗಿ ತೊಟ್ಟಿರುವ ವಯಸ್ಸಾದ ವ್ಯಕ್ತಿಯೇ? ಅಥವಾ ದೇವರು ಒಬ್ಬನೆಯೋ ಅಥವಾ ವಿವಿಧ ಪಂಥಗಳು ವಿವಿಧ ದೇವರುಗಳನ್ನು ಹೊಂದಿವೆಯೋ?

ದೇವರು ಒಬ್ಬನೇ ಇದ್ದರೆ, ಹಿಂದೂಗಳು, ಮುಸ್ಲಿಮರು, ಯಹೂದಿಗಳು, ಕ್ರಿಶ್ಚಿಯನ್ನರು, ಸಿಕ್ಖರು ಮತ್ತು ಇತರರು ಏಕೆ ಒಡೆದಾಡುತ್ತಾರೆ, ದೌರ್ಜನ್ಯ ಮಾಡುತ್ತಾರೆ, ಪೂಜಾ ಸ್ಥಳಗಳಿಗೆ ಬೆಂಕಿ ಹಚ್ಚಿ ನಾಶಮಾಡುತ್ತಾರೆ? ಇದನ್ನು ಅವರು ಅವರ ದೇವರುಗಳ ಹೆಸರಿನಲ್ಲಿ ಮಾಡುತ್ತಾರೆ. ಹಾಗಾದರೆ ದೇವರು ಏಕೆ ಅಸಹಾಯಕನಾಗುತ್ತಾನೆ? ಮಧ್ಯೆ ಪ್ರವೇಶಿಸಲು ಅಸಮರ್ಥನಾಗುತ್ತಾನೆ? ಅವನು ನಿಜವಾಗಿಯೂ ದುರ್ಬಲನೇ ಮತ್ತು ಅಸಮರ್ಥನೇ, ಅಥವಾ ಕೆಲವರು ನಂಬುವಂತೆ, ಸರ್ವಶಕ್ತನೇ? ಅವನ ಅನುಯಾಯಿಗಳ ಕೃತ್ಯಗಳಿಂದ ಸಂತೋಷಪಡುತ್ತಾನೆಯೇ ಅಥವಾ ದುಃಖಿತನಾಗುತ್ತಾನೆಯೇ? ಅವನಿಗೆ ದುಃಖವಾಗುವುದಾದರೆ, ಅವರನ್ನೇಕೆ ತಡೆಯುವುದಿಲ್ಲ ಅಥವಾ ಶಿಕ್ಷಿಸುವುದಿಲ್ಲ? ಅವನು ನಿಜವಾಗಿಯೂ ನಿಷ್ಪಕ್ಷಪಾತಿಯೇ ಮತ್ತು ಕರುಣಾಮಯಿಯೇ? ಹಾಗಿದ್ದರೆ, ಅವನೇಕೆ ಈ ಭಯಾನಕವಾದ ನಾಲ್ಕು ಸ್ತರಗಳ ಜಾತಿ ವ್ಯವಸ್ಥೆಯನ್ನು ಸೃಷ್ಟಿಸಿದ? ಈ ವ್ಯವಸ್ಥೆಯಲ್ಲಿ ಒಂದು ಜಾತಿಯು ಉಳಿದ ಜಾತಿಗಳಿಂದ ತಲತಲಾಂತರದವರೆಗೆ ತುಳಿತಕ್ಕೊಳಗಾಗುತ್ತದೆ, ಇನ್ನೊಂದು ಜಾತಿಯು ಎಲ್ಲಾ ಸವಲತ್ತುಗಳನ್ನು ಅನುಭವಿಸುತ್ತದೆ. ಈ ಅನ್ಯಾಯದಲ್ಲಿ ದೇವರ ಪಾತ್ರವಿದೆ ಎಂದರೆ, ಅವನೇಗೆ ನಿಷ್ಪಕ್ಷಪಾತಿ ಮತ್ತು ಕರುಣಾಮಯಿ ಆಗುತ್ತಾನೆ?

ನನ್ನ ಮನಸ್ಸು ದೇವರ ಬಗೆಗಿನ ಪ್ರಶ್ನೆಗಳಿಂದ ತುಂಬಿತ್ತು. ಆಗ ನಾನು ಈ ಭ್ರಷ್ಟ ಸಾಮಾಜಿಕ ರಚನೆಯ ಬಗ್ಗೆ ನನ್ನ ಪದ್ಯದಲ್ಲಿ ಕಟುವಾಗಿ ಟೀಕಿಸಿದ್ದೆ. ಜಾತಿ ವ್ಯವಸ್ಥೆಯ ಬಗೆಗಿನ ನನ್ನ ಅಸಮ್ಮತಿಯನ್ನು ಒಂದು ಪದ್ಯದಲ್ಲಿ ಬರೆದಿದ್ದೆ. ಅದರಲ್ಲಿನ ಕೆಲವು ಸಾಲುಗಳು ನನಗೆ ನೆನಪಿವೆ:

"ಬ್ರಾಹ್ಮಣರ ಮನೆಯಲ್ಲಿ ಅಥವಾ ಬನಿಯಾ ಮನೆಯಲ್ಲಿನ ಜನ್ಮವು ನಮ್ಮನ್ನು ಎಲ್ಲರಿಗಿಂತ ಮೇಲಕ್ಕೆ ಎತ್ತುತ್ತದೆಯೇ? ನಾವು ಮೇಲ್ಜಾತಿಯಲ್ಲಿ ಹುಟ್ಟಿದವರು, ನಾವು ಅತ್ಯುತ್ತಮರು ಮತ್ತು ಸಮಾಜದಲ್ಲಿ ನಮ್ಮ ಸ್ಥಾನವು ಮೇಲಿರುತ್ತದೆ. ಉನ್ನತ ಸ್ಥಾನವನ್ನು ಪಡೆಯುವುದು, ನಮ್ಮನ್ನು ನಾವು ಉತ್ತಮರು ಎಂದು ಪರಿಗಣಿಸುವುದು, ಇತರರು ಕಷ್ಟ ಅನುಭವಿಸುವಾಗ ಎಲ್ಲಾ ಸವಲತ್ತುಗಳನ್ನು ಅನುಭವಿಸುವುದು.

ನಮ್ಮ ಪೂರ್ವಜರ ಕಾಲದಿಂದ ಕೆಲಸದ ಹೊರೆಯನ್ನು ಅವರ ಹೆಗಲ ಮೇಲೆ ಹೇರಿದ್ದೇವೆ.

ಆ ಸಾಧು ಸ್ವಭಾವದ, ಸೌಮ್ಯ ಜನರಿಂದ ನಾವು ಏನನ್ನು ಮಾಡಿಸಿಲ್ಲ? 'ಅಸ್ಪೃಶ್ಯರು' ಎಂದು ಕರೆಯುವ ಅವರು ನಿಜವಾದ ಬೆನ್ನೆಲುಬು, ಕೊಳಕಿನಲ್ಲಿ ಕೆಲಸ ಮಾಡುತ್ತಾರೆ. ಅವರಿಲ್ಲದೆ ನಾವು ಈ ಸ್ಥಿತಿಯಲ್ಲಿ ಇರಲು ಸಾಧ್ಯವಿಲ್ಲ.

ಅವರು ಕಡುಕಷ್ಟದಲ್ಲಿರುವಾಗ ಮತ್ತು ನಾವು ಎಲ್ಲಾ ಹೊಂದಿರುವುದು ! ನ್ಯಾಯ ಇರಲು ಹೇಗೆ ಸಾಧ್ಯ?"

ನಂಬಿಕಸ್ತ ಆಸ್ತಿಕನಾಗಿ ಇರಲು ನನಗೆ ಬಲವಾದ ಕಾರಣಗಳಿವೆ. ಆದರೆ ನಾನು ಪ್ರಕ್ಷುಬ್ಧತೆಯನ್ನು, ಬಂಡಾಯಗಾರ ಮನೋವೃತ್ತಿಯ ಅತೃಪ್ತಿಯನ್ನೂ ಅನುಭವಿಸಿದೆ. ಸೃಷ್ಟಿಕರ್ತ ಇಲ್ಲದಿದ್ದರೆ, ಇಂತಹ ಅದ್ಭುತವಾದ ವಿಶ್ವ ಹೇಗೆ ಅಸ್ತಿತ್ವಕ್ಕೆ ಬರುತ್ತಿತ್ತು? ಈ ಸೃಷ್ಟಿಯ ನಿಯಮಗಳನ್ನು ನಿಯಂತ್ರಿಸುವ ಶಕ್ತಿಯೊಂದು ಇರಲೇಬೇಕು. ಈ ನಿಯಮಗಳ ನಿರ್ಮಾತೃ ಇರಲೇಬೇಕು. ಬ್ರಹ್ಮಾಂಡದ ಅತ್ಯಂತ ವಿಶಾಲವಾದ ನಕ್ಷತ್ರ ಪುಂಜಗಳಿಗೆ ಮತ್ತು ಅತ್ಯಂತ ಚಿಕ್ಕ ಕಣಗಳಿಗೆ, ಸಜೀವ ಮತ್ತು ನಿರ್ಜೀವ – ಅನ್ವಯವಾಗುವ ನಿಯಮಗಳನ್ನು ನೀಡುವವ ಇಲ್ಲವೇ?

ಆತ್ಮ ಮತ್ತು ಪರಮಾತ್ಮದ ಕುರಿತ ಇಂತಹ ಪ್ರಶ್ನೆಗಳು ಸುಮಾರು ಎರಡು ವರ್ಷಗಳ ಕಾಲ ನನ್ನನ್ನು ಕಾಡಿದವು. ನಾನು ವಿಪಶ್ಯನ ಪಡೆದ ಮೂರನೇ ವರ್ಷದಲ್ಲಿ ನನ್ನ ಮೂರನೇ ಶಿಬಿರದಲ್ಲಿ ಅಧಿಷ್ಠಾನದಲ್ಲಿ (ಅದಿಟ್ಠಾನದಲ್ಲಿ) ಕುಳಿತಿದ್ದ ಸಮಯದಲ್ಲಿ ಒಂದು ಪ್ರಜ್ವಲ ಒಳನೋಟದ ಕಿಡಿ ನನ್ನಲ್ಲಿ ಬಂತು. ಜೀವನದ ಅಂತಿಮ ಉದ್ದೇಶವು ಮನಸ್ಸನ್ನು ಮಲಿನತೆಗಳಿಂದ ಶುದ್ಧಿ ಮಾಡುವುದು, ಈ ಸರಿ ಅಥವಾ ತಪ್ಪು ನಂಬಿಕೆಗಳಲ್ಲಿ ಸಿಕ್ಕಿ ಹಾಕಿಕೊಳ್ಳುವುದಲ್ಲ ಎಂಬುದು ನನಗೆ ಸ್ಪಷ್ಟವಾಯಿತು. ಈ ನಂಬಿಕೆಗಳು ಮನಸ್ಸಿನ ಮಲಿನತೆಗಳಿಗೆ ಯಾವ ಸಂಬಂಧವನ್ನು ಹೊಂದಿವೆ? ಈ ತತ್ವಸಿದ್ಧಾಂತದ ಪರಿಕಲ್ಪನೆಗಳು ಯಾವ ರೀತಿಯಲ್ಲಿ ಒಳ್ಳೆಯವು?

ಚಿಕ್ಕ ವಯಸ್ಸಿನಿಂದಲೇ ನಾನು ಆತ್ಮ ಮತ್ತು ಪರಮಾತ್ಮಕ್ಕೆ ತತ್ವ ಸಿದ್ಧಾಂತದ ನಿಶ್ಚಿತಾಭಿಪ್ರಾಯವನ್ನು ಹೊಂದಿದ್ದೆ. ಆದರೆ ಕೇವಲ ನಂಬುವುದು ನನ್ನ ಮನಸ್ಸಿನ ಮಲಿನತೆಗಳನ್ನು ಹೋಗಲಾಡಿಸಲಿಲ್ಲ. ಅನೇಕ ಜನರು, ನನ್ನನ್ನೂ ಸೇರಿ, ತಮ್ಮನ್ನು ತಾವು ಆಸ್ತಿಕರೆಂದು ಪರಿಗಣಿಸುತ್ತಾರೆ. ಆದರೆ ಮಲಿನತೆಗಳಿಂದ ಬಳಲುತ್ತಾರೆ. ಇನ್ನೊಂದು ಕಡೆ, ಅನೇಕ ವಿಪಶ್ಯನ ಧ್ಯಾನ ಸಾಧಕರನ್ನು ನೋಡುತ್ತೇನೆ. ಅವರು ಆತ್ಮ ಅಥವಾ ಪರಮಾತ್ಮದ ಅಸ್ತಿತ್ವದ ಬಗ್ಗೆ ನಂಬಿಕೆಯಿಲ್ಲದಿದ್ದರೂ, ಮನಸ್ಸು ಮತ್ತು ಶರೀರದಿಂದಾಚೆಗಿನ ಅಮೃತವನ್ನು ಸವಿದಿದ್ದಾರೆ ಮತ್ತು ಅವರ ಮನಸ್ಸಿನ ಮಲಿನತೆಗಳು ಕ್ಷೀಣಿಸಿವೆ. ಸೋತಾಪನ್ನ (ಪ್ರವಾಹ ಪ್ರವೇಶಿಸುವವನು) ಅಥವಾ ಸಕದಾಗಾಮಿ (ಒಮ್ಮೆ ಮಾತ್ರ ಜನ್ಮವೆತ್ತುವವನು) ಆಗಿರುವವರೂ ಇದ್ದಾರೆ. ನಿಜವಾಗಿಯೂ ನಾನು ಕೆಲವು 'ಅನಾಗಾಮಿ'ಗಳನ್ನೂ (ಮರಳಿ ಬರದಿರುವವರು) ಕಂಡಿದ್ದೇನೆ. ಇವರ ಇಂದ್ರಿಯ ಬಯಕೆಗಳು ಸಂಪೂರ್ಣವಾಗಿ ನಾಶವಾಗಿ ಅವರು ಸ್ವಾಭಾವಿಕವಾಗಿಯೇ ಬ್ರಹ್ಮಚಾರಿಗಳಾಗಿ ಬದುಕುತ್ತಾರೆ. ಸಂಪೂರ್ಣ ಬಿಡುಗಡೆ ಹೊಂದಿದ, ಅರಹಂತನಾಗಿರುವ ಒಬ್ಬ ವ್ಯಕ್ತಿಯನ್ನೂ ನಾನು ನೋಡಿದ್ದೇನೆ.

ನಿಜವಾಗಿಯೂ ನಾನು ಏನು ಮಾಡುತ್ತಿದ್ದೇನೆ? ಎಂಬ ಮತ್ತೊಂದು ಆಲೋಚನೆಯೂ ಬಂದಿತು. ಸದ್ಗುಣವನ್ನು ಮತ್ತು ನೈತಿಕ ನಡವಳಿಕೆಯನ್ನು ಸ್ಥಿರಗೊಳಿಸಲು ನಾನು ದೃಢಪ್ರಯತ್ನ ಮಾಡುತ್ತಿದ್ದೇನೆ. ಉಸಿರಿನ ವಾಸ್ತವಿಕ ಸತ್ಯದ ಮೇಲೆ ನನ್ನ ಮನಸ್ಸನ್ನು ಕೇಂದ್ರೀಕರಿಸುವ ಅಭ್ಯಾಸವನ್ನು ನಾನು ಮಾಡುತ್ತಿದ್ದೇನೆ. ದೇಹದ ಸಂವೇದನೆಗಳನ್ನು ಗಮನಿಸುತ್ತಾ ನನ್ನ ಮನಸ್ಸಿನ ಅಶುದ್ಧತೆಗಳನ್ನು ನಿರ್ಮೂಲಮಾಡುವ ಕೆಲಸದಲ್ಲಿ ನಾನು ತೊಡಗಿದ್ದೇನೆ. ನಿಜವಾಗಿಯೂ ದೇವರು ಇದ್ದರೆ, ಅವನು ಆನಂದಪಡುವುದರಲ್ಲಿ ಅನುಮಾನವಿಲ್ಲ. ನಾನು ನೈತಿಕ ನಡವಳಿಕೆಯಲ್ಲಿ (ಶೀಲದಲ್ಲಿ), ಮನಸ್ಸಿನ ಮೇಲೆ ಪ್ರಭುತ್ವ ಸಾಧಿಸುವುದರಲ್ಲಿ (ಸಮಾಧಿಯಲ್ಲಿ) ಮತ್ತು ಪ್ರಜ್ಞೆಯಲ್ಲಿ (ಪನ್ಯಾದಲ್ಲಿ) ಸ್ಥಾಪಿತವಾಗುವುದನ್ನು ನೋಡಿ ದೇವರು ಕೋಪಗೊಳ್ಳಲು ಹೇಗೆ ಸಾಧ್ಯ? ಆ ದೇವರು ಕೇವಲ ಮನುಷ್ಯನ ಭಯವಾಗಿದ್ದರೆ ಅಥವಾ ಕೇವಲ ಪುರೋಹಿತ ದಳ್ಳಾಳಿಗಳ ಕಾಲ್ಪನಿಕ ಶಕ್ತಿ ಕೇಂದ್ರವಾಗಿದ್ದರೆ, ಈ ತಪ್ಪು ನಂಬಿಕೆಯ ಹೊರೆಯನ್ನು ನಾನೇಕೆ ಹೊರಲಿ? ಇದೇ ರೀತಿ, ಈ ಶರೀರದಲ್ಲಿ ಪ್ರತ್ಯೇಕವಾದ ಆತ್ಮವಿದ್ದರೆ, ಮಲಿನತೆಗಳಿಂದ ಬಿಡುಗಡೆ ನೀಡುವ ಈ ಧ್ಯಾನದ ಅಭ್ಯಾಸದಿಂದ ಅದಕ್ಕೂ ಪ್ರಯೋಜನವಾಗುತ್ತದೆ. ಅದು ಕೇವಲ ಈ ಆತ್ಮ ಎಂಬ ಭಾವನೆಗೆ ಅಂಟಿಕೊಂಡಿರುವವರ ಕಲ್ಪನೆಯಾಗಿದ್ದರೆ, ಈ ಕಾಲ್ಪನಿಕ ನಂಬಿಕೆಯ ಭಾರವನ್ನು ನಾನೇಕೆ ಹೊತ್ತು ಓಡಾಡಲಿ?

ಇದನ್ನು ನಾನು ಮನಗಂಡ ಕೂಡಲೇ ಆತ್ಮ ಮತ್ತು ದೇವರ ಬಗೆಗಿನ ನನ್ನ ಎಲ್ಲಾ ಊಹೆಗಳೂ ನಿಂತು ಹೋದವು. ಒಂದು ದೊಡ್ಡ ಭಾರವನ್ನು ನನ್ನ ತಲೆಯಿಂದ ಇಳಿಸಿದ ಅನುಭವವಾಯಿತು. ನನ್ನ ಮನಸ್ಸು ಎಷ್ಟೊಂದು ಹಗುರವಾಯಿತೆಂದರೆ, ಆಧ್ಯಾತ್ಮಿಕ ಮಾರ್ಗದಲ್ಲಿನ ನನ್ನ ಪ್ರಯಾಣವು ಸುಲಭವಾಯಿತು. ನನ್ನ ಆಧ್ಯಾತ್ಮಿಕ ಪ್ರಗತಿಯು ಹೆಚ್ಚಿದಂತೆ, ಆತ್ಮ ಮತ್ತು ದೇವರ

ನಂಬಿಕೆಯ ಇಡೀ ಜಾಲವು ಸ್ಪಷ್ಟವಾಯಿತು. ಆಸ್ತಿಕ ಮತ್ತು ನಾಸ್ತಿಕದ ಗೊಂದಲಗಳು ನಿವಾರಣೆಯಾದವು. ಸತ್ಯವೇ ದೇವರು ಮತ್ತು ಅಂತಿಮ ಸತ್ಯವೇ ಸರ್ವೋಚ್ಚ ದೇವರು ಎಂಬುದನ್ನು ಒಪ್ಪಿಕೊಳ್ಳಲು ಯಾವುದೇ ಅಡ್ಡಿ ಉಂಟಾಗಲಿಲ್ಲ.

ನಿಜವಾದ ಧಮ್ಮವು (ಧರ್ಮವು) ಸಾರ್ವತ್ರಿಕವಾದುದು, ನಿರಂತರವಾದುದು, ಅಂತಿಮವಾದುದು. ಅದು ಸರ್ವವ್ಯಾಪಿ, ಪ್ರತಿಯೊಂದು ಜೀವಿಯಲ್ಲೂ ಇರುತ್ತದೆ. ಅದು ಆಂತರಿಕ ಮಾರ್ಗದರ್ಶಿ, ಅದಕ್ಕೆ ಎಲ್ಲವೂ ತಿಳಿದಿದೆ. ಅದು ನಿರಾಕಾರ, ಗುಣಲಕ್ಷಣಗಳನ್ನು ಮೀರಿದ್ದು, ಅದು ಬರುವುದೂ ಇಲ್ಲ, ಹೋಗುವುದೂ ಇಲ್ಲ. ಅದು ಅಗಾಧವಾದುದು, ಗ್ರಹಿಕೆಗೆ ನಿಲುಕದ್ದು, ಪರಿಶುದ್ಧವಾದುದು, ದೋಷರಹಿತವಾದುದು, ಅದರ ನಿಯಮವು ಎಲ್ಲಾ ಸಜೀವ ಮತ್ತು ನಿರ್ಜೀವ ಜೀವಗಳಿಗೆ ಅನ್ವಯವಾಗುತ್ತದೆ. ಪ್ರತಿಯೊಂದು ಅಣು, ಇಡೀ ಬ್ರಹ್ಮಾಂಡಕ್ಕೆ ಅನ್ವಯವಾಗುವ ಅದ್ಭುತವಾದ ನಿಯಮಗಳು. ಈ ನಿಯಮಗಳ ಪ್ರಕಾರವೇ ಸೂರ್ಯ, ಚಂದ್ರ, ನಕ್ಷತ್ರಗಳು, ಇಡೀ ನಕ್ಷತ್ರ ಪುಂಜಗಳು ಕೆಲಸ ಮಾಡುವುದು. ಈ ನಿಯಮಗಳ ಪ್ರಕಾರವೇ ಇಡೀ ವಿಶ್ವದ ಸೃಷ್ಟಿ, ಸ್ಥಿತಿ, ಲಯ ಮತ್ತು ಪುನರುತ್ಪತ್ತಿಯ ಚಕ್ರವು ಕೆಲಸ ಮಾಡುವುದು. ಈಗ, ಈ ನಿರಾಕಾರ ಅಸ್ತಿತ್ವದ ಶಕ್ತಿಯನ್ನು ಒಪ್ಪುವುದರಲ್ಲಿ ಕಿಂಚಿತ್ತೂ ಅನುಮಾನವಿರಲಿಲ್ಲ. ಈ ಸಾಕ್ಷಾತ್ಕಾರಕ್ಕೆ ಬರುವುದು ನಿಜವಾಗಿಯೂ ಒಂದು ದೊಡ್ಡ ಅನುಗ್ರಹ.

## ಗೋಯಂಕಾಜಿಯವರೊಡನೆ ಪ್ರಶ್ನೋತ್ತರಗಳು

(ಫಾರ್ ದ ಬೆನಿಫಿಟ್ ಆಫ್ ಮೆನಿ' ಇಂಗ್ಲಿಷ್ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ)

**ಪ್ರಶ್ನೆ** : ಶಿಬಿರದಲ್ಲಿ ಪುರುಷ ಮತ್ತು ಮಹಿಳೆಯರ ಪ್ರತ್ಯೇಕತೆ ಏಕೆ ಇರುತ್ತದೆ?

**ಗೋಯಂಕಾಜಿ** : ನಾವು ಇತರೆ ಧ್ಯಾನ ಪದ್ಧತಿಗಳನ್ನು ಅನುಸರಿಸಿ ಕೆಲಸ ಮಾಡುತ್ತಿದ್ದರೆ ಇದರ ಅವಶ್ಯಕತೆ ಇರಲಿಲ್ಲ. ಏಕೆಂದರೆ ಅವು ಮನಸ್ಸಿನ ಮೇಲ್ಪದರದಲ್ಲಿ ಕೆಲಸ ಮಾಡುತ್ತಾ ನಿಮ್ಮ ಅಂತರಾಳದಲ್ಲಿರುವುದನ್ನು ಮರೆಯುವಂತೆ ಮಾಡುತ್ತವೆ. ಆದರೆ ಈ ಧ್ಯಾನ ಪದ್ಧತಿಯು ಸಂಪೂರ್ಣವಾಗಿ ಭಿನ್ನವಾಗಿದೆ. ಪ್ರಾರಂಭದಿಂದಲೇ ಇದು ಮನಸ್ಸಿನ ಶಸ್ತ್ರಚಿಕಿತ್ಸೆಯನ್ನು ಆರಂಭಿಸುತ್ತದೆ, ಆಳ ಮನಸ್ಸಿನ ಅಶುದ್ಧತೆಗಳನ್ನು ಹೊರತೆಗೆಯುತ್ತದೆ. ನೀವು ಗಾಯಕ್ಕೆ ಶಸ್ತ್ರ ಚಿಕಿತ್ಸೆ ಮಾಡಿದಾಗ ಕೀವು ಹೊರಬರುತ್ತದೆ ; ಗುಲಾಬಿ ನೀರನ್ನು ನೀವು ನಿರೀಕ್ಷಿಸಲು ಆಗುವುದಿಲ್ಲ. ಮನಸ್ಸಿನ ಕೀವು ಯಾವುದು? ನಿಮ್ಮಲ್ಲಿರುವ ಅತ್ಯಂತ ಕೆಟ್ಟ ಕೀವು ಲೈಂಗಿಕ ಭಾವೋದ್ರೇಕ. ನೀವು ವಾಸಿಸುವ ಇಡೀ ಲೋಕವನ್ನು 'ಕಾಮ–ಲೋಕ' ಎಂದು ಕರೆಯಲಾಗುತ್ತದೆ. ಈ ಲೋಕದಲ್ಲಿ ಲೈಂಗಿಕ ಭಾವೋದ್ರೇಕವೇ ಪ್ರಧಾನವಾಗಿದೆ. ಮೇಲ್ಮಟ್ಟದಲ್ಲಿ ನಿಮ್ಮ ಹುಟ್ಟೇ ನಿಮ್ಮ ಪೋಷಕರ ಲೈಂಗಿಕ ಸಂಪರ್ಕದ ಕಾರಣದಿಂದ ಆಗಿದೆ. ಕಾಮೋದ್ರೇಕದ ಮೂಲಾಧಾರವು ಅಂತರಾಳದಲ್ಲಿದೆ. ಲೈಂಗಿಕ ಭಾವೋದ್ರೇಕವು ಮನಸ್ಸಿನ ಮೇಲ್ಪದರಕ್ಕೆ ಬಂದರೆ, ಮಹಿಳೆಯ ತರಂಗಗಳ ಸಂಪರ್ಕಕ್ಕೆ ಬರುವ ಪುರುಷನಲ್ಲಿ ಅದು ಬಲಯುತವಾಗುತ್ತದೆ. ಒಬ್ಬ ಮಹಿಳೆಯು ಲೈಂಗಿಕಾಸಕ್ತಿ ಬೆಳೆಸಿಕೊಂಡರೆ, ಪುರುಷನ ತರಂಗಗಳ ಸಂಪರ್ಕಕ್ಕೆ ಬಂದಾಗ ಅದು ಬಲಯುತವಾಗುತ್ತದೆ. ನೀವು ಈ ಮನಸ್ಸಿನ ಶಸ್ತ್ರಕ್ರಿಯೆ ಮಾಡುವಾಗ ಪರಸ್ಪರ ಸಂಪರ್ಕದಲ್ಲಿರುವುದು ಅಪಾಯಕಾರಿ. ಅದು ನಿಮಗೆ ಹಾನಿಮಾಡುತ್ತದೆ. ಕಾಮೋದ್ರೇಕದಿಂದ ಹೊರಬರುವ ಬದಲು ನೀವು ಅದನ್ನು ದ್ವಿಗುಣಗೊಳಿಸಿಕೊಳ್ಳುವ ಸಾಧ್ಯತೆಯೇ ಹೆಚ್ಚಿದೆ. ಆದ್ದರಿಂದ ಎಷ್ಟು ಸಾಧ್ಯವೋ ಅಷ್ಟು ಪ್ರತ್ಯೇಕವಾಗಿರಿ ಇದು ಅತ್ಯಾವಶ್ಯಕ.

**ಪ್ರಶ್ನೆ** : ವಿಪಶ್ಯನ ಧ್ಯಾನದಿಂದ ಭಾರತೀಯರಿಗಿಂತ ವಿದೇಶಿಯರು ಹೆಚ್ಚು ಪ್ರಯೋಜನ ಪಡೆಯುವುದನ್ನು ನಾವು ಕಂಡಿದ್ದೇವೆ. ನಮಗೆ ಹೋಲಿಸಿದರೆ ಅವರು ಹೆಚ್ಚು ಶಿಸ್ತು ಮತ್ತು ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ. ಸೇವೆ ಮಾಡುವುದರಲ್ಲೂ ಅಷ್ಟೇ, ಬಹಳ ಶ್ರದ್ಧೆ ಮತ್ತು ಸ್ವಾರ್ಥರಹಿತವಾಗಿರುತ್ತಾರೆ ಮತ್ತು ಯಾವುದೇ ವಿಭಾಗದಲ್ಲೂ ಕೆಲಸ ಮಾಡಲು ತಯಾರಿರುತ್ತಾರೆ. ಏಕೆ ಹೀಗೆ ?

**ಗೋಯಂಕಾಜಿ** : ಧರ್ಮದ ಬೋಧನೆಯು ಎಲ್ಲರಿಗೂ ಒಂದೇ. ಆದರೆ ನೀವು ಕೆಲಸ ಮಾಡುವುದಿಲ್ಲ ! ಆದ್ದರಿಂದ, ನೀವೇಕೆ ಕೆಲಸ ಮಾಡುವುದಿಲ್ಲ ಎಂದು ನಿಮ್ಮನ್ನು ನೀವು ಪರೀಕ್ಷಿಸಿಕೊಳ್ಳಿ, ಕಷ್ಟ ಏನೆಂದರೆ, "ಆತ್ಮವಿದೆ, ದೇವರಿದ್ದಾನೆ, ನಾನು ಇದನ್ನು ನಂಬುತ್ತೇನೆ" ಎಂಬ ತತ್ವಸಿದ್ಧಾಂತದ ಹುಚ್ಚಾಟದಲ್ಲಿ ನೀವೆಲ್ಲಾ ತೊಡಗಿದ್ದೀರಿ. ಅದೆಲ್ಲವೂ ದೊಡ್ಡ ಅಡ್ಡಿಯಾಗುತ್ತದೆ. ಈ ಜನರು ಹೆಚ್ಚು ಕಮ್ಮಿ ಆ ಹುಚ್ಚುತನದಿಂದ ಹೊರಬಂದಿದ್ದಾರೆ. "ನಾನು ಒಂದು ಧ್ಯಾನ ವಿಧಾನವನ್ನು ಕಲಿಯಲು ಇಲ್ಲಿದ್ದೇನೆ. ಅದು ನನ್ನ ಮನಸ್ಸನ್ನು ಶುದ್ಧಿ ಮಾಡುತ್ತದೆ ಮತ್ತು ನನ್ನನ್ನು ಒಳ್ಳೆಯ ವ್ಯಕ್ತಿಯನ್ನಾಗಿ ಮಾಡುತ್ತದೆ" ಎಂದು ಅವರು ಯೋಚಿಸುತ್ತಾರೆ. ಆದ್ದರಿಂದ ಅವರು ಕೆಲಸ ಮಾಡುತ್ತಾರೆ. ಅಥವಾ, "ನಾನೊಬ್ಬ ಬಹಳ ಸಂಪ್ರದಾಯ ಶೀಲ ಹಿಂದು"…. "ನಾನು ಬಹಳ ಕಟ್ಟಾ ಜೈನ್." ನಾನು ಇದಕ್ಕೆ ಮತಾಂತರವಾಗಲು ಸಾಧ್ಯವಿಲ್ಲ" ಎಂಬಂಥ ಬಂಧನಗಳನ್ನು ನೀವು ಹೊಂದಿದ್ದೀರಿ. ವಿಪಶ್ಯನದ ಮೂಲಕ ನೀವು ಬೌದ್ಧ ಧರ್ಮಕ್ಕೆ ಮತಾಂತರವಾಗುವುದಿಲ್ಲ, ನೀವು ಧರ್ಮಕ್ಕೆ (ಪ್ರಕೃತಿಯ ನಿಯಮಕ್ಕೆ) ಪರಿವರ್ತನೆಯಾಗುತ್ತೀರಿ. ಆದರೂ ಈ ಪ್ರಶ್ನೆ ನಿಮ್ಮಲ್ಲಿ ಪದೇಪದೇ ಬರುತ್ತಿರುತ್ತದೆ. ಈ ಬಂಧನಗಳಿಂದ ನೀವು ಹೊರಬರದಿದ್ದರೆ, ನಿಮಗೆ ಸಹಾಯ ಮಾಡಲು ಆಗುವುದಿಲ್ಲ. ಈ ಬಂಧನಗಳಿಂದ ಹೊರಬನ್ನಿ! ಧಮ್ಮವು ಸಾರ್ವತ್ರಿಕ ಎಂಬುದನ್ನು ಅರ್ಥ ಮಾಡಿಕೊಳ್ಳಿ, ಇದು ಬದುಕುವ ಕಲೆ. ಮನಸ್ಸಿನ ಮೇಲೆ ನಿಯಂತ್ರಣ ಬೆಳೆಸಿಕೊಳ್ಳುವುದು, ಮನಸ್ಸನ್ನು ಶುದ್ಧಿ ಮಾಡುವುದು ಮತ್ತು ಆ ಮುಖೇನ ಆರೋಗ್ಯಕರ ಜೀವನ ನಡೆಸುವುದು. ಇದೇ ಜೀವನ ಕಲೆ. ಇದನ್ನು ನೀವು ಒಮ್ಮೆ ಅರ್ಥಮಾಡಿಕೊಂಡರೆ, ನೀವು ಹೆಚ್ಚು ಕೆಲಸ ಮಾಡುತ್ತೀರಿ. ಆಗ, ಪಾಶ್ಚಿಮಾತ್ಯರಲ್ಲಿ ಇರುವ ನೀವು ಹೇಳಿದ ಆ ಎಲ್ಲಾ ಗುಣಗಳೂ ನಿಮ್ಮಲ್ಲಿಯೂ ಬಂದೇ ಬರುತ್ತವೆ. ಪ್ರಕೃತಿಯು ಭಿನ್ನಭೇದ ಮಾಡುವುದಿಲ್ಲ.

**ಪ್ರಶ್ನೆ** : ಪೂಜ್ಯ ವೆಬು ಸಯಾದೋ ಅವರು ತಮ್ಮ 'ದ ಎಸೆನ್ಷಲ್ ಪ್ರಾಕ್ಟೀಸ್' ಎಂಬ ಪುಸ್ತಕದಲ್ಲಿ 'ಆನಾಪಾನಸತಿ'ಯು ನಿಬ್ಬಾಣಕ್ಕೆ ಹತ್ತಿರದ ದಾರಿ ಎಂದು ಹೇಳುತ್ತಾರೆ. ಒಂದು ಚಿಕ್ಕ ಸ್ಥಾನದಲ್ಲಿ ಮಾತ್ರ ಸಂವೇದನೆಗಳನ್ನು ಗಮನಿಸುತ್ತಿದ್ದರೆ, ಇದು ಹೇಗೆ ಸಾಧ್ಯ? ಮತ್ತು ನೀವು 'ವೇದನಾ' ದ ಸಂಪೂರ್ಣ ಕ್ಷೇತ್ರವನ್ನು ಗಮನಿಸಬೇಕು ಎಂದು ಪ್ರತಿಪಾದಿಸುತ್ತೀರಿ. ದಯವಿಟ್ಟು ಇದನ್ನು ವಿವರಿಸುತ್ತೀರಾ?

**ಗೋಯಂಕಾಜಿ** : ಬಹಳ ಒಳ್ಳೆಯ ಪ್ರಶ್ನೆ. ಈ ಸಂಪ್ರದಾಯವನ್ನು ಪಕ್ಕದ ಬರ್ಮಾ ದೇಶದಲ್ಲಿ ಹೇಗೆ ಕಾಪಾಡಿದರು ಎಂಬುದನ್ನು ಅರ್ಥಮಾಡಿಕೊಳ್ಳದೇ ಇರುವ ಜನರಲ್ಲಿ ಬಹಳ ತಪ್ಪು ತಿಳುವಳಿಕೆಗಳಿವೆ. ಪೂಜ್ಯ ವೆಬು ಸಯಾದೋ ಅವರು ಆ ದೇಶದ ಒಂದು ನಿರ್ದಿಷ್ಟ ಸಂಪ್ರದಾಯಕ್ಕೆ ಸೇರಿದವರು. ವಿದ್ಯಾರ್ಥಿಯು ಆನಾಪಾನದಿಂದ ಪ್ರಾರಂಭಿಸಬೇಕು ಎಂದು ಆ ಸಂಪ್ರದಾಯ ಹೇಳುತ್ತದೆ. ನೀವು ಸಮಾಧಿಯನ್ನು ಬೆಳೆಸಿಕೊಳ್ಳಲು ಧ್ಯಾನದ ಅನೇಕ ವಸ್ತುಗಳಿವೆ. ಆನಾಪಾನದಿಂದ ನೀವು ಸಮಾಧಿಯನ್ನು ಬೆಳೆಸಿಕೊಂಡರೆ, ಅವರು ಬಹಳ ಸರಿಯಾಗಿ ಹೇಳಿದಂತೆ, ಇದು ನಿಬ್ಬಾಣಕ್ಕೆ ಹತ್ತಿರದ ದಾರಿ.

ಅನೇಕ ಬಾರಿ ನಾನು ಅವರನ್ನು ಭೇಟಿ ಮಾಡಿದ್ದರಿಂದ ಮತ್ತು ಅವರ ಜೊತೆ ತುಂಬಾ ಆಪ್ತತೆ ಇದ್ದುದರಿಂದ ಅವರ ಬೋಧನೆ ನನಗೆ ಗೊತ್ತು. ಅವರ ಬೋಧನೆಯಿಃ ಉಸಿರನ್ನು ಗಮನಿಸುತ್ತಿರು, ಉಸಿರು ಸ್ಪರ್ಶಿಸುವ ಸ್ಥಾನವನ್ನು ಅರಿಯುತ್ತಿರು. ಸಂವೇದನೆಯು ಸ್ಪಷ್ಟವಾಗಿ ಗಮನಕ್ಕೆ ಬರುವ ಒಂದು ಸಮಯ ಬರುತ್ತದೆ ಮತ್ತು ಈ ಸಂವೇದನೆಯು ತನ್ನಷ್ಟಕ್ಕೆ ತಾನೇ ಇಡೀ ಶರೀರಕ್ಕೆ ಹರಡಬೇಕು. ಅದು ಇಡೀ ದೇಹಕ್ಕೆ ಹರಡದ ಹೊರತು ನೀವು ನಿಬ್ಬಾಣದ ಹಂತವನ್ನು ತಲುಪಲು ಸಾಧ್ಯವಿಲ್ಲ. ಏಕೆಂದರೆ, ನೀವು 'ಭಂಗ'ವನ್ನು ಅನುಭವಿಸಲು ಸಾಧ್ಯವಿಲ್ಲ. ಶರೀರದ ಒಂದು ಚಿಕ್ಕ ಭಾಗದಲ್ಲಿ ಸಂವೇದನೆಯನ್ನು ಅನುಭವಿಸುವುದು 'ಭಂಗ' ಅಲ್ಲ. ಇಡೀ 'ನಾಮ' (ಮನಸ್ಸು) ಮತ್ತು ರೂಪ (ಶರೀರ) ಸಂಪೂರ್ಣವಾಗಿ ಕರಗಬೇಕು. ಇದು 'ಭಂಗ'. "ಭಂಗ" ತಲುಪದೇ ನೀವು ನಿಬ್ಬಾಣವನ್ನು ತಲುಪುತ್ತೀರಿ" ಎಂದು ಪೂಜ್ಯ ವೆಬು ಸಯಾದೋ ಅವರು ಯಾರಿಗೂ ಹೇಳಲಿಲ್ಲ. ಅಂತಹ ಹೇಳಿಕೆಯು ಅವರ ಬೋಧನೆಯನ್ನು ತಪ್ಪಾಗಿ ಅರ್ಥೈಸುವುದಾಗಿದೆ.

**ಪ್ರಶ್ನೆ** : ವಿಶ್ವದಲ್ಲಿರುವ ದುಃಖವನ್ನು ಹೋಗಲಾಡಿಸಲು ನಾವೆಲ್ಲಾ ಧಮ್ಮವನ್ನು ಹರಡಬಯಸುತ್ತೇವೆ. ಆದರೆ ನಮ್ಮ ಪಂಥವನ್ನು ವಿಸ್ತರಿಸಲು ಇತರರ ಮೇಲೆ ನಾವು ಧರ್ಮವನ್ನು ಹೇರುತ್ತಿದ್ದೇವೆ ಎಂಬ ಭಾವನೆಯನ್ನು ಸೃಷ್ಟಿಸಲು ನಾವ್ಯಾರೂ ಬಯಸುವುದಿಲ್ಲ. ವಿಪಶ್ಯನವು ಒಂದು ಪಂಥ ಎಂಬ ಹಣೆಪಟ್ಟಿ ಹಚ್ಚಲು ಇತರರಿಗೆ ಅವಕಾಶ ಕೊಡದ ರೀತಿಯಲ್ಲಿ ಈ ಅದ್ಭುತವಾದ ಧ್ಯಾನ ವಿಧಾನದ ಬಗ್ಗೆ ಮಾಹಿತಿ ತಿಳಿಸಲು ಮಾರ್ಗದರ್ಶನ ಮಾಡುವಿರಾ?

**ಗೋಯಂಕಾಜಿ** : ನೀವು ಇತರರ ಮೇಲೆ ವಿಪಶ್ಯನವನ್ನು ಹೇರಿದರೆ, ನೀವು ಜನರನ್ನು ಧಮ್ಮದಿಂದ ದೂರ ತಳ್ಳುತ್ತೀರಿ. ಯಾರೇ ಆಗಲಿ ಈ ಅದ್ಭುತವಾದ ಧಮ್ಮವನ್ನು ಇತರರ ಮೇಲೆ ಹೇರಲು ಹೇಗೆ ಸಾಧ್ಯ? ವಾಸ್ತವವಾಗಿ ಸಂಪ್ರದಾಯ– ಆರೋಗ್ಯಕರವಾದ ಸಂಪ್ರದಾಯ– ಹೇಗಿದೆ ಎಂದರೆ, ವ್ಯಕ್ತಿಯು ಬಹಳ ನಮ್ರತೆಯಿಂದ ಪ್ರಾರ್ಥಿಸದ ಹೊರತು ಧಮ್ಮವನ್ನು ಕೊಡುವುದಿಲ್ಲ. ನೀವು ಅದನ್ನು ಇತರರ ಮೇಲೆ ಹೇರಲು ಹೇಗೆ ಸಾಧ್ಯ? ಯಾರಾದರೂ ಬೇಡಿದರೆ ಆಗ ನೀವು ಅದನ್ನು ಕೊಡಿ. ಇತರರ ಮೇಲೆ ಧಮ್ಮವನ್ನು ಹೇರುವ ವ್ಯಕ್ತಿಯು ಪಂಥೀಯತೆಯನ್ನು ನಿಶ್ಚಿತವಾಗಿ ಹರಡುತ್ತಾನೆ.

ಧಮ್ಮವೆಂದರೆ ಧಮ್ಮ. ಅದನ್ನು ಅತ್ಯಂತ ಪ್ರೀತಿ ಮತ್ತು ಕರುಣೆಯಿಂದ ನೀಡಬೇಕು. ಜನರು ಇಷ್ಟಪಟ್ಟು, ಗೌರವಯುತವಾಗಿ ಸ್ವೀಕರಿಸಬೇಕು. ಆಗ ಮಾತ್ರ ಅದು ಧಮ್ಮ, ಇಲ್ಲವಾದರೆ ಅದು ಧಮ್ಮ ಅಲ್ಲ.

**ಪ್ರಶ್ನೆ** : ಅರೆಕಾಲಿಕ ಧಮ್ಮ ಸೇವಕರು ಪಂಚಶೀಲಗಳನ್ನು ಪಾಲನೆ ಮಾಡುವ ಅವಶ್ಯಕತೆ ಇದೆಯೇ?

**ಗೋಯಂಕಾಜಿ** : ಅರೆಕಾಲಿಕ ಅಥವಾ ಪೂರ್ಣಕಾಲಿಕ, ವ್ಯಕ್ತಿಯು ಧಮ್ಮ ಸೇವೆ ಮಾಡಲು ಪ್ರಾರಂಭಿಸಿದ್ದಾನೆ. ಈಗ ನೀವು ಧಮ್ಮ ಮಾರ್ಗವನ್ನು ಆಯ್ಕೆ

**RNI. No. : KARKAN/2015/68727. Postal Regn. No.: RNP/KA/BGS/2253/2023-25**
**Published On 10th & Posted On 20th of June Posted At : Bengaluru PSO, B'luru 26. Price(Annual)Rs.30.**

ಮಾಡಿಕೊಂಡಿದ್ದೀರಿ ಮತ್ತು ನೀವು ಧಮ್ಮವನ್ನು ಹರಡಬಯಸಿದ್ದೀರಿ ಎಂಬುದನ್ನು ಇದು ತೋರಿಸುತ್ತದೆ. ನಿಮ್ಮ ಜೀವನದಲ್ಲಿಯೇ ನೀವು ಧರ್ಮವನ್ನು ಅಳವಡಿಸಿಕೊಳ್ಳದಿದ್ದರೆ, ಇತರರಿಗೆ ನೀವು ಧಮ್ಮವನ್ನು ಹರಡಲು ಹೇಗೆ ಮಾಧ್ಯಮವಾಗುತ್ತೀರಿ?

ಜೊತೆಗೆ, ನೀವು ಧಮ್ಮ ಸೇವಕರಾಗುವುದನ್ನು ಆಯ್ಕೆಮಾಡಿಕೊಂಡಿದ್ದೀರೆಂದರೆ ಜನರು ನಿಮ್ಮ ನಡವಳಿಕೆಯನ್ನು, ನಿಮ್ಮ ಜೀವನಕ್ರಮವನ್ನು ಗಮನಿಸುತ್ತಾರೆ. ನಿಮ್ಮ ನಡವಳಿಕೆಯು ಸರಿಯಿಲ್ಲದಿದ್ದರೆ, ಜನರು ಧಮ್ಮಕ್ಕೆ ಹೇಗೆ ಬರುತ್ತಾರೆ?

ಆದ್ದರಿಂದ ಧಮ್ಮವನ್ನು ಹರಡುವುದಕ್ಕೆ ಮಾತ್ರವಲ್ಲ, ನಿಮ್ಮ ಸ್ವಹಿತದಿಂದಲೂ ನೀವು ಪಂಚಶೀಲಗಳನ್ನು ಪಾಲಿಸಬೇಕು.

**ಪ್ರಶ್ನೆ :** ಗುರೂಜಿ, ಸಹಾಯಕ ಆಚಾರ್ಯರುಗಳ, ಟ್ರಸ್ಟೀಗಳ ಮತ್ತು ಧರ್ಮ ಸೇವಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಬಗ್ಗೆ ದಯವಿಟ್ಟು ಮತ್ತೊಮ್ಮೆ ನಮಗೆ ತಿಳಿಸಿ.

**ಗೋಯಂಕಾಜಿ :** ಒಂದು ರಾಶಿ ಕರ್ತವ್ಯಗಳು ಮತ್ತು ಜವಾಬ್ದಾರಿಗಳಿವೆ, ಆದರೆ ಅಧಿಕಾರವಿಲ್ಲ. "ನಾನು ಈಗ ಧಮ್ಮ ಸೇವಕನಾಗಿರುವುದರಿಂದ, ಈ ಎಲ್ಲಾ ವಿದ್ಯಾರ್ಥಿಗಳನ್ನು ನಿಯಂತ್ರಿಸಲು ನನಗೆ ಅಧಿಕಾರವಿದೆ. ನಾನು ಒಬ್ಬ ಪೊಲೀಸಿನವನಂತೆ ಅಥವಾ ಪೊಲೀಸಿನವಳಂತೆ ; ಶಿಸ್ತು ಸಂಹಿತೆಯಲ್ಲಿ ಬರೆದಿರುವ ನಿಯಮಗಳ ಪ್ರಕಾರ ಎಲ್ಲರೂ ನಡೆದುಕೊಳ್ಳುವಂತೆ ಮಾಡುತ್ತೇನೆ" ಎಂದು ಯಾರೂ ಎಂದಿಗೂ ಆಲೋಚಿಸಬಾರದು. ಈ ರೀತಿಯ ಭಾವನೆಯಿರುವ ವ್ಯಕ್ತಿಯು ಸೇವೆಮಾಡಲು ಅರ್ಹನಲ್ಲ.

ಅಥವಾ "ನಾನು ಟ್ರಸ್ಟಿ ಆಗಿದ್ದೇನೆ. ನಾನು ಈ ಸಂಸ್ಥೆಯ ಸಾಧಾರಣ ಸದಸ್ಯನಲ್ಲ. ಒಳ್ಳೆಯದಿರಲಿ ಅಥವಾ ಕೆಟ್ಟದ್ದಿರಲಿ, ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ನನಗಿದೆ" ಎಂದು ಯೋಚಿಸಬಾರದು. ಈ ವ್ಯಕ್ತಿಯು ಟ್ರಸ್ಟಿ ಆಗಲು ಅರ್ಹನಲ್ಲ.

ಸಹಾಯಕ ಆಚಾರ್ಯ ಅಥವಾ ಹಿರಿಯ ಸಹಾಯಕ ಆಚಾರ್ಯ ಅಥವಾ ಸಹ ಆಚಾರ್ಯರಾಗಿರುವವರು, "ನನಗೆ ಈಗ ಅಧಿಕಾರವಿದೆ! ನಾನು ಯಾರನ್ನು ಬೇಕಾದರೂ ಖಂಡಿಸಬಹುದು. ನನ್ನ ಜೊತೆ ಸರಿಯಾದ ಸಂಬಂಧವಿಟ್ಟುಕೊಂಡಿಲ್ಲದಿರುವ ವ್ಯಕ್ತಿಯನ್ನು ತೆಗೆದುಹಾಕುವಂತೆ ನಾನು ನೋಡಿಕೊಳ್ಳಬಹುದು" ಎಂದು ಯೋಚಿಸಬಾರದು. ಹೀಗೇನಾದರೂ ಆಲೋಚಿಸಿದರೆ, ನೀವು ಯಾವ ರೀತಿಯ ಆಚಾರ್ಯರು? ಒಬ್ಬ ತಂದೆಯ, ಒಬ್ಬ ತಾಯಿಯ ಭಾವನೆಯನ್ನು ಬೆಳೆಸಿಕೊಳ್ಳಬೇಕು ; "ತನ್ನ ಸ್ವಂತ ಮಕ್ಕಳನ್ನು ನೋಡಿಕೊಳ್ಳುವ ಒಬ್ಬ ತಾಯಿ ಅಥವಾ ತಂದೆಯ ಗುಣವನ್ನು ಬೆಳೆಸಿಕೊಳ್ಳಲು ನನಗೆ ಈ ಜವಾಬ್ದಾರಿಯನ್ನು ವಹಿಸಲಾಗಿದೆ. ಒಂದು ಮಗುವಿಗೆ ತೊಂದರೆಯಿದ್ದರೆ, ಆ ಮಗುವಿನ ಬಗೆಗೆ ನನ್ನ ಮೈತ್ರಿ ಮತ್ತು ಕರುಣೆ ಅಧಿಕವಾಗುತ್ತದೆ" ಎಂದು ಯೋಚಿಸಬೇಕು. ಕೇವಲ ಜವಾಬ್ದಾರಿ ಮತ್ತು ಸೇವೆ, ಯಾವ ಅಧಿಕಾರವೂ ಇಲ್ಲ.

ಧರ್ಮ ಮಾರ್ಗದಲ್ಲಿ ಪ್ರಗತಿ ಹೊಂದಬಯಸುವ ವ್ಯಕ್ತಿಯು, ಅಧಿಕಾರ ಅಥವಾ ಪ್ರತಿಷ್ಠೆ ಇಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಇವುಗಳನ್ನು ಗಳಿಸುವ ನಿರೀಕ್ಷೆಯಿಟ್ಟುಕೊಂಡಿರುವ ವ್ಯಕ್ತಿಯು, ತನ್ನ ಜವಾಬ್ದಾರಿಯನ್ನು ಬಿಟ್ಟು ಸಾಧಾರಣ ಧ್ಯಾನ ಸಾಧಕನಾಗಿ ಕೆಲಸ ಮಾಡಬೇಕು. ಇಡೀ ಮಾರ್ಗವು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಮಾಡುವ ನಿಸ್ವಾರ್ಥ ಸೇವೆ ಎಂಬುದನ್ನು ವ್ಯಕ್ತಿಯು ಅರ್ಥಮಾಡಿಕೊಳ್ಳಬೇಕು.

"ನಿನ್ನ ತಲೆಯನ್ನು ತೆಗೆ, ನಿನ್ನ ಅಹಂನ್ನು ತ್ಯಜಿಸು, ನನ್ನ ಜೊತೆ ಬಾ" ಎಂದು ನಾನು ಹೇಳುತ್ತಿರಿರುತ್ತೇನೆ. ನೀವು ಇದನ್ನು ಮಾಡುವುದಾದರೆ, ಹೌದು, ನೀನು ನನ್ನ ಜೊತೆ ಬರಲು ಅರ್ಹನಾಗಿದ್ದೀಯ. ಇಲ್ಲವಾದರೆ ನೀನು ನನ್ನ ಜೊತೆ ಬರುವುದಿಲ್ಲ. ನೀನು ನನ್ನ ಜೊತೆ ಬಿಡುತ್ತೀಯ.

ಆದ್ದರಿಂದ, ಧಮ್ಮ ಸೇವಕ, ಟ್ರಸ್ಟಿ ಅಥವಾ ಸಹಾಯಕ, ಹಿರಿಯ ಸಹಾಯಕ ಅಥವಾ ಸಹ ಆಚಾರ್ಯ, ಯಾರೇ ಆಗಲಿ ಅಹಂ ಇರಬಾರದು. ವ್ಯಕ್ತಿಯು ಅಧಿಕಾರ ಮತ್ತು ಸಾಮರ್ಥ್ಯದ ಬಗ್ಗೆ ಯೋಚಿಸಿದರೆ, ಅಲ್ಲಿ ಅಹಂ ಇರುತ್ತದೆ. ವ್ಯಕ್ತಿಯು ಸೇವೆಯ ಬಗ್ಗೆ ಯೋಚಿಸಿದಾಗ, ಅಲ್ಲಿ ನಮ್ರತೆಯಿರುತ್ತದೆ. ಈ ಗುಣವು ಪ್ರತಿಯೊಬ್ಬರಲ್ಲೂ ಇರಬೇಕು. ಈ ಗುಣ ಇರುವುದನ್ನು ನಾನು ಕಾಣುತ್ತಿದ್ದೇನೆ. ಹಾಗಾಗಿಯೇ ಧರ್ಮವು ಹರಡುತ್ತಿದೆ. ಮತ್ತು ಅದು ಹರಡುತ್ತದೆ. ಅದರ ಬಗ್ಗೆ ನನಗೆ ಬಹಳ ವಿಶ್ವಾಸವಿದೆ.

ಭವತು ಸಬ್ಬ ಮಂಗಳಂ
(ಎಲ್ಲಾ ಜೀವಿಗಳಿಗೂ ಮಂಗಳವಾಗಲಿ)

**ವಿಪಶ್ಯನವನ್ನು ಕಲಿಯುವ ಒಬ್ಬ ಹಿಂದೂ ತನ್ನನ್ನು ತಾನು ಹಿಂದೂ ಎಂದು ಕರೆದುಕೊಳ್ಳಬಹುದು; ಹೀಗೆಯೇ ಒಬ್ಬ ಮುಸ್ಲಿಂ, ಒಬ್ಬ ಜೈನ, ಒಬ್ಬ ಕ್ರೈಸ್ತ, ಒಬ್ಬ ಬೌದ್ಧ ಮಾಡಬಹುದು. ಮುಖ್ಯವಾದ ಅಂಶವೆಂದರೆ ಒಳ್ಳೆಯ ವ್ಯಕ್ತಿಯಾಗುವುದು, ಸಂತೋಷ ಮತ್ತು ಸಾಮರಸ್ಯದ ಜೀವನ ನಡೆಸುವುದು, ಒಳ್ಳೆಯ ಮಾನವನಾಗಲು ಧಮ್ಮವು ಪ್ರತಿಯೊಬ್ಬರಿಗೂ ಸಹಾಯ ಮಾಡುತ್ತದೆ.**

**–ಎಸ್.ಎನ್. ಗೋಯಂಕಾ**

**ಧಮ್ಮ ಪಪುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು**:2024:ಫೆಬ್ರವರಿ24–7ಮಾರ್ಚ್ 10–21, 29–9 ಏಪ್ರಿಲ್ 12–23, 26–7 ಮೇ 24–4 ಜೂನ್ 7–18,21–2 ಜುಲೈ 5–16, 26–6, ಆಗಸ್ಟ್ 9–20, 23–3 ಸೆಪ್ಟಂಬರ್, 6–1, 6–17, 21–29 ಅಕ್ಟೋಬರ್, 2–13, 25–5 ನವೆಂಬರ್, 8–19, 22–3, ಸೆಪ್ಟಂಬರ್ 6–17, 20–31.

**ವಿಳಾಸ :** ಧಮ್ಮ ಪಪುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್)ನಗರ ಸಾರಿಗೆ ಬಸ್ ಸಂಖ್ಯೆ :256,258,258ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 99009 55930. ಇ–ಮೇಲ್ : info@ paphulla. dhamma. org;website; www.vridhamma. org.

**ಧಮ್ಮ ನಗರಿ ವಿಪಶ್ಯನ ಧ್ಯಾನ ಕೇಂದ್ರ, ದಾವಣಗೆರೆ.**

**ಹತ್ತು ದಿನದ ಶಿಬಿರಗಳು** –2024: ಮೇ 29 ರಿಂದ ಜೂನ್ 9, ಜೂನ್ 19 ರಿಂದ 30, ಜುಲೈ 10 ರಿಂದ 21, ಜುಲೈ 31 ರಿಂದ ಆಗಸ್ಟ್ 11, ಆಗಸ್ಟ್ 21 ರಿಂದ ಸೆಪ್ಟಂಬರ್ 1, ಸೆಪ್ಟಂಬರ್ 11 ರಿಂದ 22, ಅಕ್ಟೋಬರ್ 16 ರಿಂದ 27, ನವೆಂಬರ್ 6 ರಿಂದ 17, ನವೆಂಬರ್ 27 ರಿಂದ ಡಿಸೆಂಬರ್ 8,ಡಿಸೆಂಬರ್ 18 ರಿಂದ 29.

**ಮೂರು ದಿನದ ಶಿಬಿರಗಳು** 2024– ಮಾರ್ಚ್ 14 ರಿಂದ 17 ಮತ್ತು 28 ರಿಂದ 31 ಅಕ್ಟೋಬರ್ 3–6.

ಮೇ 23 : ಒಂದು ದಿನದ ಧ್ಯಾನ ಶಿಬಿರ ಬುದ್ಧ ಪೂರ್ಣಿಮ ಸಲುವಾಗಿ ವೆಬ್‌ಸೈಟ್ :https://www. dhamma. org/en/schedules/

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು: ಬಿ.ಪ್ರದೀಪ ಕುಮಾರ, ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
**ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.

ಗೆ, ______________________

______________________

______________________